ನಾನು ಕೊಲೆ ಆದರೆ, ನನ್ನ ಆಸ್ತಿ, ಸೈನಿಕರ ಕಲ್ಯಾಣ ನಿಧಿಗೆ ಹೋಗಲಿ ಎಂದು ವಿಲ್ ಮಾಡಿಕೊಂಡು, ಇವತ್ತು ಸರಿಯಾದ ಸಮಯಕ್ಕೆ ಬರಲು ಹೇಳಿದ್ದೆ. ನೀನು ನನ್ನ ಸಾವನ್ನು ಆತ್ಮಹತ್ಯೆ ಎಂದು ಹೇಳುತ್ತೀಯ... ಅದನ್ನು ನಂಬಲು ಪೂರಕ ಸಾಕ್ಷಿ ಇಲ್ಲದೆ, ಆಸ್ತಿಗೋಸ್ಕರ ನೀನು ಮತ್ತು ನನ್ನ ಪತ್ನಿ ಇಬ್ಬರೂ ಸೇರಿ ನನ್ನನ್ನು ಕೊಲೆ ಮಾಡಿ, ಅದನ್ನು ಆತ್ಮಹತ್ಯೆ ಎಂದು ಬಿಂಬಿಸಲು ಪ್ರಯತ್ನಿಸುತ್ತಿದ್ದೀರ ಎಂದು ಪೊಲೀಸರಿಗೆ ಮನವರಿಕೆ ಆಗುತ್ತದೆ. ನಿಮ್ಮನ್ನು ಕೋರ್ಟಿನಲ್ಲಿ ನನ್ನ ಲಾಯರ್ ನೋಡಿಕೊಳ್ಳುತ್ತಾನೆ... ಅವಳ ಸೌಂದರ್ಯಕ್ಕೆ ಮಾರುಹೋಗಿ ನಿನ್ನ ಜೀವನ ಹಾಳು ಮಾಡಿಕೊಂಡೆ. ಇನ್ನು ಹದಿನಾರು ವರ್ಷ ಇಬ್ಬರೂ ಜೈಲಿನಲ್ಲಿ ಕಳೆಯಲು ತಯಾರಾಗಿರಿ... ಬೈ...' ದನಿ ನಿಂತಿತು.

'ಸರ್...' ರಾಕೇಶ್ ಸಾವರಿಸಿಕೊಂಡು ಕೂಗಿದ. ನಾಗೇಶ್ ಸಮೇತ ಎಲ್ಲರೂ ಅವನನ್ನೇ ತಿರುಗಿ ನೋಡಿದರು.

'ಸರ್, ಈಗ ಕೃಷ್ಣನ್ ಅವರ ವಾಯ್ಸ್ ಮೆಸೇಜ್ ಬಂದಿತ್ತು ಈ ಫೋನ್‌ಗೆ. ಅದರಲ್ಲಿ ಅವರೇ ತಾನು ಆತ್ಮಹತ್ಯೆ ಮಾಡಿಕೊಂಡು ಅದರ ಅಪವಾದ ನನ್ನ ಮೇಲೆ ಬರುವ ಹಾಗೆ ಮಾಡಿದೆ ಎಂದು ಹೇಳಿದ್ದಾರೆ... ನಾನು ರೆಕಾರ್ಡ್ ಮಾಡಿಕೊಂಡಿದ್ದೇನೆ...'

ಅಲ್ಲಿದ್ದವರಿಗೆಲ್ಲ ಒಮ್ಮೆಲೇ ಆಶ್ಚರ್ಯ!

'ನೋಡಿ ಸರ್, ನಾನು ಪ್ಲೇ ಮಾಡಿ ತೋರಿಸುತ್ತೇನೆ.'

ಫೋನ್‌ನ ಬಟನ್ ಒತ್ತಿದ. ಇಡೀ ಫೋನ್ ಸ್ಕ್ರೀನ್ ಖಾಲಿ! ಯಾವ ಬಟನ್ ಒತ್ತಿದರೂ ಕೆಲಸ ಮಾಡುತ್ತಿಲ್ಲ!

'ಸರ್, ಅವರು ಚಾಣಾಕ್ಷ, ಆ ಮೆಸೇಜ್ ಜೊತೆಗೆ ಯಾವುದೊ ವೈರಸ್ ಕಳುಹಿಸಿ ನನ್ನ ಇಡೀ ಫೋನ್‌ನ ಎಲ್ಲ ವಿವರಗಳೂ ಡಿಲಿಟ್ ಆಗುವಹಾಗೆ ಮಾಡಿದ್ದಾರೆ...' ಹತಾಶನಾಗಿ ಕೂಗಿದ.

'ಸಾಕು ನಿಮ್ಮ ನಾಟಕ ರಾಕೇಶ್, ಏನೇ ಹೇಳುವುದಿದ್ದರೂ ಕೋರ್ಟ್‌ನಲ್ಲಿ ಹೇಳಿ.'

ತನ್ನ ಕಣ್ಣ ಮುಂದೆ ಸಾಗಿದ ಕೃಷ್ಣನ್‌ನ ಶವವನ್ನು ಒಮ್ಮೆ ನೋಡಿದ ರಾಕೇಶ್... ಅದು ಅವನನ್ನು ನೋಡಿ, ವ್ಯಂಗ್ಯವಾಗಿ ನಕ್ಕಂತೆ ಅನಿಸಿತು.


**ವಾಸುದೇವ ಮೂರ್ತಿ ಪಿ.**

ಹುಟ್ಟಿದ ಊರು ಶಿವಮೊಗ್ಗ. ಬೆಂಗಳೂರಿನಲ್ಲಿ ಸಿವಿಲ್ ಎಂಜಿನಿಯರ್ ವೃತ್ತಿ. ಸಂವಹನ ಕಲೆ ಮತ್ತು ಇತರ ವೃತ್ತಿಪರ ಕೌಶಲ್ಯಗಳಿಗೆ ತರಬೇತಿ ಕೊಡುವ ಸಂಸ್ಥೆಯೊಂದನ್ನು ನಡೆಸುತ್ತಿದ್ದಾರೆ. ಮೊದಲಿನಿಂದಲೂ ಪತ್ತೆದಾರಿ ಸಾಹಿತ್ಯದ ಬಗ್ಗೆ ಆಸಕ್ತಿ. ಪತ್ತೆದಾರಿ ಕಾದಂಬರಿಕಾರರಾದ ಎನ್. ನರಸಿಂಹಯ್ಯ, ಟಿ.ಕೆ. ರಾಮರಾವ್ ಅವರ ಕಾದಂಬರಿಗಳಿಂದ ಶುರುವಾದ ಓದುವ ಆಸಕ್ತಿ ಬಳಿಕ ಪತ್ತೆದಾರಿ ಕತೆಗಳ ಬರವಣಿಗೆಯತ್ತ ಹೊರಳಿದೆ.